ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ
**Karnataka State Rural Development and Panchayat Raj University**

Raitha Bhavana, General Cariappa Circle, Gadag-582 101
ರೈತ ಭವನ, ಜನರಲ್ ಕಾರ್ಯಪ್ಪ ವೃತ್ತ, ಗದಗ– 582 101

**E-mail: ksrdpru@gmail.com** **Phone: 08372-230338, Fax: 08372-297343**

ದಿನಾಂಕ 26ನೇ ಏಪ್ರಿಲ್ 2019 ರಂದು ಶುಕ್ರವಾರ ಬೆಳಗ್ಗೆ 11.00 ಗಂಟೆಗೆ, ಬೆಂಗಳೂರಿನ ಪ್ರಾದೇಶಿಕ ಕಛೇರಿಯಲ್ಲಿ ಜರುಗಿದ ಶೈಕ್ಷಣಿಕ ಪರಿಷತ್ತಿನ ಎರಡನೆಯ ಸಾಮಾನ್ಯ ಸಭೆಯ ನಡವಳಿಗಳು

**Proceedings of the Second Ordinary Meeting of the Academic Council held on Friday, the 26th April, 2019.**

**MEMBERS PRESENT**:

1. Prof. B. Thimme Gowda
   Vice Chancellor, KSRDPR University — Chairperson
2. Smt. Neeti Sharma — Member
   Sr. Vice President & Co-Founder,
   Team Lease Services Pvt. Ltd., Bengaluru
3. Prof. Gopal Naik, Dean, Economics & Social Science,
   IIM, Bengaluru
4. Dr. S.S. Meenakshisundaram — Member
   Chairman, MYRADA
5. Prof. C.S. Patil — Member
   Dean & Director, KSLU Law School
   Karnataka State Law University, Hubballi
6. Dr. N. Sivanna — Member
   Director I/c., Centre for Research, Innovation and Evaluation, KSRDPRU
7. Prof. Suresh V. Nadagoudar
   Registrar, KSRDPR University — Member-Secretary

***Members not present*:**

1. Prof. Ajjappa Alagawadi
2. Director, Abdul Nazeer Sab SIRD
   Mysuru

The Vice Chancellor extended a warm welcome to all the members for the Second Ordinary Meeting of the Academic Council and introduced the new Member Prof. N. Sivanna, Honorary Professor and in-charge Director of the Centre of Research, Innovation

and Evaluation to the Academic Council. He briefed the members about the recent activities of the University carried out after the last meeting and sought the suggestions and guidance from the members on the agenda of the meeting. Then the Agenda was taken up.

**ವಿಷಯ ಸಂಖ್ಯೆ 1: ಶೈಕ್ಷಣಿಕ ಪರಿಷತ್ತಿನ ಹಿಂದಿನ ಸಭೆಯ ನಡವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.**

**Subject No. 1: Confirmation of the Proceedings of the previous Academic Council Meeting- reg.**

ದಿನಾಂಕ 5ನೇ ಜನವರಿ 2019 ರಂದು ಬೆಳಗ್ಗೆ 11.00 ಗಂಟೆಗೆ, ಬೆಂಗಳೂರಿನ ಪ್ರಾದೇಶಿಕ ಕಛೇರಿಯಲ್ಲಿ ಜರುಗಿದ ಶೈಕ್ಷಣಿಕ ಪರಿಷತ್ತಿನ ವಿಶೇಷ ಸಭೆಯ ನಡವಳಿಗಳನ್ನು ಸ್ಥಿರೀಕರಿಸಲು ಶೈಕ್ಷಣಿಕ ಪರಿಷತ್ತಿನ ಸಭೆಯ ಮುಂದೆ ಮಂಡಿಸಲಾಗಿದೆ.

**Reference Note:**

The proceedings of the Special meeting of the Academic Council held on 5th January 2019 at 11:00 a.m. in the Regional Office, KSRDPR University, Bengaluru are placed before the Academic Council for confirmation.

*ನಿರ್ಣಯ:*

**ದಿನಾಂಕ 5ನೇ ಜನವರಿ 2019 ರಂದು ಬೆಳಗ್ಗೆ 11.00 ಗಂಟೆಗೆ ಜರುಗಿದ ಶೈಕ್ಷಣಿಕ ಪರಿಷತ್ತಿನ ವಿಶೇಷ ಸಭೆಯ ನಡವಳಿಗಳನ್ನು ಶೈಕ್ಷಣಿಕ ಪರಿಷತ್ತು ಸ್ಥಿರೀಕರಿಸಿತು.**

***Resolution:***

**The Academic Council confirmed the Proceedings of the Special meeting of the Academic Council held on 5th January 2019.**

**ವಿಷಯ ಸಂಖ್ಯೆ 2: To consider the Regulations Governing the Appointment and Promotion of Teachers and other Academic Staff in the Karnataka State Rural Development and Panchayat Raj University, Gadag and its Regional Centres as per the UGC Regulations, 2019.**

**AND**

**ಹೆಚ್ಚುವರಿ ಕಾರ್ಯಸೂಚಿ Additional Agenda-1**

**ವಿಷಯ ಸಂಖ್ಯೆ 7: To consider the draft Regulations relating to manner of conducting interview for Appointment of Teachers and other Academic Staff in the Karnataka State Rural Development and Panchayat Raj University, Gadag and its Regional Centres, 2019, as per the UGC Regulations-2018.**

**ಪರಾಮರ್ಶನ ಟಿಪ್ಪಣಿ-(ವಿಷಯ ಸಂಖ್ಯೆ 2):**

ಯು.ಜಿ.ಸಿ-2018ರ ವಿನಿಯಮಗಳನ್ವಯ ವಿಶ್ವವಿದ್ಯಾಲಯದ ಶಿಕ್ಷಕರ ಮತ್ತು ಶೈಕ್ಷಣಿಕ ಸಿಬ್ಬಂದಿಗಳ ನೇಮಕಾತಿ ಮತ್ತು ಬಡ್ತಿಗೆ ಸಂಬಂಧಪಟ್ಟಂತೆ ವಿನಿಮಯಗಳನ್ನು ರಚಿಸಿರುವುದರಿಂದ ಶಿಕ್ಷಕರ ಮತ್ತು ಇತರ ಶೈಕ್ಷಣಿಕ ಸಿಬ್ಬಂದಿಯ ನೇಮಕಾತಿ ಹಾಗೂ ವೃತ್ತಿ ಪ್ರಗತಿ ಬಡ್ತಿಗೆ ಸಂದರ್ಶನ ನಡೆಸುವ ಕ್ರಮಗಳ ಕುರಿತು ವಿನಿಯಮಗಳನ್ನು ರಚಿಸುವ ಅಗತ್ಯತೆ ಇರುವುದರಿಂದ ಪ್ರಕರಣ 56 ಮತ್ತು 64ರಡಿ ವಿನಿಯಮಗಳನ್ನು ರಚಿಸಲಾಗಿದೆ. ಸದರಿ ವಿನಿಯಮಗಳನ್ನು ಶೈಕ್ಷಣಿಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

**Reference Note (Subject-2):**

Consequent to framing of "Regulations Governing the Appointment and Promotion of Teachers and other Academic Staff in the Karnataka State Rural Development and Panchayat Raj University, Gadag and its Regional Centres as per the UGC Regulations, 2019", it has become necessary to have Regulations relating to manner of conducting interview for appointment of Teachers and other Academic Staff. Therefore, draft Regulations have been framed under Section 56 read with Section 64 of the Karnataka State Rural Development and Panchayat Raj University Act, 2016 as per UGC Regulations and placed before the Academic Council for consideration and approval.

**ಪರಾಮರ್ಷನ ಟಿಪ್ಪಣಿ--(ವಿಷಯ ಸಂಖ್ಯೆ 7):**

ವಿಶ್ವವಿದ್ಯಾಲಯಗಳ ಶಿಕ್ಷಕರ ಮತ್ತು ಇತರೆ ಶೈಕ್ಷಣಿಕ ಸಿಬ್ಬಂದಿಯ ನೇಮಕಾತಿ ಮತ್ತು ಬಡ್ತಿಗೆ ಸಂಬಂಧಿಸಿದಂತೆ 2018 ರ ಯು.ಜಿ.ಸಿ ವಿನಿಯಮಗಳನುಸಾರ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳು ರಚಿಸಲಾಗಿದ್ದ ಕರಡು ವಿನಿಯಮಗಳನ್ನು ದಿನಾಂಕ 06-08-2018 ರಂದು ಜರುಗಿದ ಶೈಕ್ಷಣಿಕ ಪರಿಷತ್ತಿನ ಪ್ರಥಮ ಸಾಮಾನ್ಯ ಸಭೆಯಲ್ಲಿ ಪರಿಗಣಿಸಿ ಅನುಮೋದಿಸಲಾಗಿತ್ತು. ಆದರೆ, ಕೇಂದ್ರದ 7ನೇ ವೇತನ ಆಯೋಗದ ಶಿಫಾರಸುಗಳನ್ವಯ ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿಗಳನ್ನು ದಿನಾಂಕ 01-01-2016 ರಿಂದ ಜಾರಿಗೆ ಬರುವಂತೆ ರಾಜ್ಯದ ವಿಶ್ವವಿದ್ಯಾಲಯಗಳ ಮತ್ತು ಕಾಲೇಜು ಅಧ್ಯಾಪಕರುಗಳಿಗೆ ವಿಸ್ತರಿಸುವ ವಿಷಯ ಸರ್ಕಾರದ ಪರಿಗಣನೆಯಲ್ಲಿದ್ದುದರಿಂದ ಸದರಿ ವಿನಿಯಮಗಳನ್ನು ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗಿಲ್ಲ. ಈಗ ದಿನಾಂಕ 16-03-2019 ರ ಸರ್ಕಾರಿ ಆದೇಶ ಸಂಖ್ಯೆ ಇಡಿ 483 ಯುಎನ್‌ಇ 2017, ರಲ್ಲಿ ರಾಜ್ಯ ಸರ್ಕಾರ ಯು.ಜಿ.ಸಿ ವೇತನ ಶ್ರೇಣಿಗಳನ್ನು ಮತ್ತು ಇತರೆ ಷರತ್ತುಗಳನ್ನು ಪರಿಷ್ಕರಿಸಿ ಆದೇಶ ಹೊರಡಿಸಿದೆ. ಈ ಹಿನ್ನೆಲೆಯಲ್ಲಿ ಪರಿಷ್ಕೃತ ವೇತನ ಶ್ರೇಣಿಗಳನ್ನು ಮತ್ತು ಇತರೆ ಅಂಶಗಳನ್ನು ಅಳವಡಿಸಿಕೊಂಡು ವಿನಿಯಮಗಳನ್ನು ಮಾರ್ಪಡಿಸಲಾಗಿದೆ. ಈ ಮಾರ್ಪಡಿತ ವಿನಿಯಮಗಳನ್ನು ಶೈಕ್ಷಣಿಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗೆ ಮರು ಮಂಡಿಸಲಾಗಿದೆ.

**Reference Note-(Subject-7)::**

The draft Regulations governing the Appointment and Promotion of Teachers and other Academic Staff in the Karnataka State Rural Development and Panchayat Raj University, Gadag and its Regional Centres as per the UGC Regulations, 2018, framed by the First Vice Chancellor have been approved by the Academic Council at its meeting held on 6th August 2018 could not be submitted to the Government as the extension of revised UGC pay scales as per 7th Central Pay Commission to the teachers and other academic staff of the Universities in Karnataka was under consideration by the State Government.

Now, the State Government vide Order No. ED 483 UNE 2017, dated 16th March 2019 have issued orders revising the existing pay scales of the Teachers, Librarians, Physical Education and equivalent cadres in Universities in the State coming under the purview of Higher Education Department with effect from 01.01.2016. All the teaching andother academic posts have been created/sanctioned in the pre-revised UGC Scales of pay as were prevailed in the Higher Education Department. Thus the revised UGC Scales of Pay are applicable to Teachers and other academic staff of RDPR University.

Therefore, the draft Regulations approved by the Academic Council on 6th August 2018 have been modified by adopting the revised UGC pay scales and other conditions as per above Government Order dated 16th March 2019 and the same is placed before the Academic Council for consideration and approval.

*ನಿರ್ಣಯ:*

ಮೇಲಿನ ಎರಡೂ ವಿಷಯಗಳು ಅಂತರ-ಸಂಬಂಧಿತವಾದವುಗಳಾದ್ದರಿಂದ ಎರಡನ್ನೂ ಒಟ್ಟಿಗೆ ಪರಿಗಣಿಸಲಾಯಿತು. ವಿನಿಮಯಗಳಲ್ಲಿನ ವಿವಿಧ ಅವಕಾಶಗಳು ಹಾಗೂ ವಿಶ್ವವಿದ್ಯಾಲಯ ಅನುದಾನ ಆಯೋಗದ ವಿನಿಮಯಗಳು-2018 ಮತ್ತು ಸರ್ಕಾರಿ ಆದೇಶ ಸಂಖ್ಯೆ: ಇಡಿ 483 ಯುಎನ್ಇ 2017, ದಿನಾಂಕ 16-03-2019 ವನ್ನು ಶೈಕ್ಷಣಿಕ ಪರಿಷತ್ತು ಪರಿಶೀಲಿಸಿ ಸುಧೀರ್ಘವಾಗಿ ಚರ್ಚಿಸಿತು.
ನಂತರ ಶೈಕ್ಷಣಿಕ ಪರಿಷತ್ತು ಕೆಲವು ಮಾರ್ಪಾಡುಗಳನ್ನು ಸೂಚಿಸಿ ಎರಡೂ ವಿನಿಮಯಗಳನ್ನು ಅನುಮೋದಿಸಲು ನಿರ್ಣಯಿಸಿತು ಹಾಗೂ ಮುಂದಿನ ಕ್ರಮ ತೆಗೆದುಕೊಳ್ಳಲು ಕುಲಪತಿಗಳಿಗೆ ಅಧೀಕರಿಸಿತು. ಮುಂದುವರೆದು, ವಿನಿಮಯಗಳಲ್ಲಿ ನಿಗಧಿಪಡಿಸಿದ ಅರ್ಹತೆ ಮತ್ತು ಮಾನದಂಡಗಳ ಅನುಸಾರ 1:5 ರ ಪ್ರಮಾಣದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲು ನಿರ್ಣಯಿಸಲಾಯಿತು.

***Resolution:***

**As both the above subjects are inter-related they were considered together. The Academic Council had detailed deliberations on various provisions of the above Regulations vis-à-vis the "UGC Regulations on Minimum Qualifications for Appointment of Teachers and other Academic Staff in Universities and Colleges and Measures for the Maintenance of Standards in Higher Education, 2018" and the Government Order No. ED 483 UNE 2017 dated 16-03-2019 relating to "Revision of UGC Pay Scales of Teachers, Librarians & Equivalent Cadre personnel in Govt./Aided First Grade Colleges, Govt./Aided B.Ed. Colleges and State Government Universities under the purview of the Higher Education Department".**

**The Academic Council resolved to approve the above two draft Regulations with certain modifications as suggested and authorized the Vice Chancellor to effect other necessary changes or modifications required and take further action in the matter.**

**It was further resolved to short list the candidates based on merit and criteria prescribed in the Regulations in the ratio of 1:5 for calling for interview.**

**ವಿಷಯ ಸಂಖ್ಯೆ 3, 4 ಮತ್ತು 5: ಕರಡು ವಿನಿಮಯಗಳನ್ನು ಪರಿಗಣಿಸುವ ಬಗ್ಗೆ.**

**ಪರಾಮರ್ಷನ ಟಿಪ್ಪಣಿ**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016ರ ಪ್ರಕರಣ 56 (1) ರ ಪ್ರಕಾರ ಕಾರ್ಯನಿರ್ವಾಹಕ ಪರಿಷತ್ತು ವಿಶ್ವವಿದ್ಯಾಲಯದ ವ್ಯವಹರಣೆಗಳ ಆಡಳಿತ ಮತ್ತು ವ್ಯವಸ್ಥಾಪನೆಗಾಗಿ ಉಪಬಂಧವನ್ನು ಕಲ್ಪಿಸುವ ವಿನಿಮಯಗಳನ್ನು ರಚಿಸುವ ಅಧಿಕಾರವನ್ನು ಹೊಂದಿದೆ. ಪ್ರಕರಣ 56 (2) ರ ಪ್ರಕಾರ (1) ನೇ ಉಪ ಪ್ರಕರಣದ (ಎ) ನಿಂದ (ಜಿ) ವರೆಗಿನ ಖಂಡಗಳಲ್ಲಿ ನಿರೂಪಿಸಿರುವ ಎಲ್ಲಾ ವಿಷಯಗಳು

ಮತ್ತು ಪೂರಕ ಹಾಗೂ ಅದಕ್ಕೆ ಸಂಬಂದಿಸಿದ ವಿಚಾರಗಳ ಕುರಿತಾಗಿ ವಿನಿಮಯಗಳನ್ನು ಪ್ರಸ್ತಾವಿಸುವ ಅಧಿಕಾರವು ಶೈಕ್ಷಣಿಕ ಪರಿಷತ್ತಿಗೆ ಇರುತ್ತದೆ.

ಅದರಂತೆ ವಿಶ್ವವಿದ್ಯಾಲಯದ ವ್ಯವಹರಣೆಗಳ ಆಡಳತ ಮತ್ತು ವ್ಯವಸ್ಥಾಪನೆಗೆ ಅಗತ್ಯವಿರುವ ಈ ಕೆಳಕಂಡ ಎರಡು ವಿನಿಮಯಗಳನ್ನು ರಚಿಸಿ ಶೈಕ್ಷಣಿಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

i) **The Karnataka State Rural Development And Panchayat Raj University (Arrangements for Transport, Food and Accommodation to University Students During Field Visits / Project Work / Internship) Regulations, 2019.**

ii) **The Karnataka State Rural Development And Panchayat Raj University (Establishment and Functions of Centralized Placement Cell) Regulations, 2019.**

iii) **The Karnataka State Rural Development And Panchayat Raj University (Constitution of Standing Committee and Appointment of Ad-Hoc Committees) Regulations, 2019**

**Reference Note:**

Section 56(1) of the Karnataka State Rural Development and Panchayat Raj University Act, 2016 deals with the provisions for making the Regulations by the Executive Council to provide for the administration and management of the affairs of the University. Under Section 56 (2) of the Act, the Academic Council shall have the power to propose regulations on all matters specified in clauses (a) to (g) of sub-section (1) and matters incidental and related thereto in this regard.

Accordingly, the following two Regulations necessary for the functioning of the University have been proposed under relevant provisions of the Act and are placed before the Academic Council for consideration and approval.

i) **The Karnataka State Rural Development and Panchayat Raj University (Arrangements for Transport, Food and Accommodation to University Students and Faculty During Field Visits / Project Work / Internship) Regulations, 2019.**

ii) **The Karnataka State Rural Development and Panchayat Raj University (Establishment and Functions of Centralized Placement Cell) Regulations, 2019.**

iii) **The Karnataka State Rural Development and Panchayat Raj University (Constitution of Standing Committee and Appointment of Ad-Hoc Committees) Regulations, 2019.**

*ನಿರ್ಣಯ:*

**ಈ ಕೆಳಕಂಡ ನಿರ್ದಿಷ್ಟ ಹಾಗೂ ಇನ್ನಿತರ ಸೂಚಿತ ಮಾರ್ಪಾಟುಗಳೊಂದಿಗೆ ಮೇಲಿನ ಮೂರು ವಿನಿಮಯಗಳನ್ನು ಅನುಮೋದಿಸಲು ಶೈಕ್ಷಣಿಕ ಪರಿಷತ್ತು ನಿರ್ಣಯಿಸಿತು ಹಾಗೂ ಇದರ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲು ಕುಲಪತಿಗಳಿಗೆ ಅಧೀಕರಿಸಿತು.**

B. Thimmegowda

### *Resolution:*

The Academic Council resolved to approve the above three Regulations with the following specific modifications along with other modifications as suggested and authorized the Vice Chancellor to effect necessary changes and take further action in the matter.

a) In the Regulations relating to Establishment and Functions of Centralized Placement Cell, in Clause 4 (Advisory Committee), the members suggested to include two members from Industry nominated by the Vice Chancellor in place of Finance Officer.

b) In Clause 5 (Functions), it was resolved to insert the words "Private Sector Undertakings" in sub-clause ii) after the words "Social Service Organizations".

c) Sub-Clause iv) of Clause 5, modify the first line to read as "To conduct Pre-Placement Talks *with the students* and different organizations.....".

d) To add one more sub-clause to Clause 5, providing for giving feed back by the Placement Officer to the Departmental Heads regarding the capabilities and skills of students required for placements.

e) To insert a provision for fixing a target to the Placement Officer in providing placements to the University graduates.

f) To make provisions for payments towards expenses of placement related meetings, conveyance, expenses to attend placement interviews at different places by the students etc.

**ವಿಷಯ ಸಂಖ್ಯೆ 6: To consider "The Karnataka State Rural Development and Panchayat Raj University Ordinances Governing the Admission of students to various Courses, Scholarship, Payment of Fees, Conduct and Residence of Students, 2019."**

**ಪರಾಮರ್ಷನ ಟಿಪ್ಪಣಿ**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016ರ ಪ್ರಕರಣ 57 ರಲ್ಲಿ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯ ಪ್ರವೇಶಕ್ಕೆ ಶುಲ್ಕ ವಿಧಿಸುವುದು, ವಿದ್ಯಾರ್ಥಿಗಳಲ್ಲಿ ಶಿಸ್ತು ನಿರ್ವಹಣೆ ಇತ್ಯಾದಿಗಳಿಗೆ ಪರ್ಯಾದೇಶಗಳನ್ನು ಕಲ್ಪಿಸಲು ಅವಕಾಶವಿದೆ.

ಅದರಂತೆ, ವಿಶ್ವವಿದ್ಯಾಲಯದ ವಿವಿಧ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶ, ವಿದ್ಯಾರ್ಥಿ ವೇತನ, ಶುಲ್ಕ ಪಾವತಿ, ಶಿಸ್ತು ಪಾಲನೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಪರ್ಯಾದೇಶಗಳನ್ನು ರಚಿಸಲಾಗಿದೆ. ಇವುಗಳನ್ನು ಶೈಕ್ಷಣಿಕ ಪರಿಷತ್ತಿನ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

**Reference Note:**

Section 57(1) of the Karnataka State Rural Development and Panchayat Raj University Act, 2016 provides for making Ordinances relating to the admission of the students to the University and the levy of fees for admission to the University and other related matters.

Accordingly, a draft Ordinance governing Admission of Students to various Courses, Scholarships, Payment of fees, Conduct and Residence of Students, is proposed and placed before the Academic Council for consideration and approval.

*ನಿರ್ಣಯ:*

**ಶೈಕ್ಷಣಿಕ ಪರಿಷತ್ತು ಸುಧೀರ್ಘ ಚರ್ಚೆಯ ನಂತರ "The Karnataka State Rural Development and Panchayat Raj University Ordinances Governing the Admission of students to various Courses, Scholarship, Payment of Fees, Conduct and Residence of Students, 2019." ಕರಡು ಪರ್ಯಾದೇಶಗಳನ್ನು ಕೆಲವು ಸೂಚಿತ ತಿದ್ದುಪಡಿಗಳೊಂದಿಗೆ ಅನುಮೋದಿಸಿತು ಹಾಗೂ ಇದರ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳಲು ಕುಲಪತಿಗಳಿಗೆ ಅಧಿಕರಿಸಿತು.**

***Resolution:***

**The Academic Council after a detailed discussion, resolved to approve the Ordinance Governing the Admission of students to various Courses, Scholarship, Payment of Fees, Conduct and Residence of Students, 2019, with certain modifications as suggested and authorized the Vice Chancellor to take further action in the matter.**

**ಹೆಚ್ಚುವರಿ ಕಾರ್ಯಸೂಚಿ-2**

**ವಿಷಯ ಸಂಖ್ಯೆ 8: ಎರಡು ವರ್ಷಗಳ ಸ್ನಾತಕೋತ್ತರ ಪದವಿ ಕೋರ್ಸುಗಳ (ಸಿ.ಬಿ.ಸಿ.ಎಸ್) ಪರ್ಯಾದೇಶಗಳಲ್ಲಿ ರ‍್ಯಾಂಕುಗಳನ್ನು ಘೋಷಿಸಲು ಅವಕಾಶ ಕಲ್ಪಿಸುವ ಬಗ್ಗೆ ಕುಲಪತಿಗಳು ಮಾಡಿರುವ ಆದೇಶವನ್ನು ಅನುಮೋದಿಸುವ ಬಗ್ಗೆ.**

**Ratification of the Order made by the Vice Chancellor regarding Declaration of Ranks under Two years (Four semesters) Masters Degree Programmes (CBCS) in various Schools of the University.**

**ಪರಾಮರ್ಷನ ಟಿಪ್ಪಣಿ**

ವಿಶ್ವವಿದ್ಯಾಲಯದ ವಿವಿಧ ಶಾಲೆಗಳಲ್ಲಿ ನಡೆಸುತ್ತಿರುವ ಎರಡು ವರ್ಷಗಳು (ನಾಲ್ಕು ಸೆಮಿಸ್ಟರ್‌ಗಳು) ಸ್ನಾತಕೋತ್ತರ ಪದವಿ ಕೋರ್ಸ್ (ಸಿ.ಬಿ.ಸಿ.ಎಸ್)ಗೆ ಸಂಬಂಧಿಸಿದ ಪರ್ಯಾದೇಶಗಳು ದಿನಾಂಕ 19-11-2018 ರಂದು ಕುಲಾಧಿಪತಿಗಳಿಂದ ಅನುಮೋದನೆ/ ಅಂಕಿತಗೊಂಡಿವೆ. ಸದರಿ ಪರ್ಯಾದೇಶದ ಕಂಡಿಕೆ 18.2 ರ ಪ್ರಕಾರ "The candidates who pass all the semester examinations in the first attempts are eligible for ranks provided they secure at least CGPA of 6.00 (Alpha-Sign Grade A).

ಕಂಡಿಕೆ 23 ರಲ್ಲಿ ಈ ಪರ್ಯಾದೇಶದ ಅವಕಾಶಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉಂಟಾದಲ್ಲಿ ಕುಲಪತಿಗಳು ಆದೇಶದ ಮೂಲಕ ಅಧಿನಿಯಮ, ವಿನಿಯಮ ಪರ್ಯಾದೇಶಗಳಿಗೆ ವಿರುದ್ಧವಾಗದ ರೀತಿಯಲ್ಲಿ ಆದೇಶದ ಮೂಲಕ ಅಂತಹ ತೊಂದರೆ ನಿವಾರಣೆಗೆ ಅವಕಾಶ ಕಲ್ಪಿಸಲು ಅಧಿಕಾರ ಹೊಂದಿರುತ್ತಾರೆ. ಕುಲಪತಿಗಳ ಅಂತಹ ಆದೇಶಗಳು ವಿಶ್ವವಿದ್ಯಾಲಯದ ಸಂಬಂಧಪಟ್ಟ ಪ್ರಾಧಿಕಾರಗಳ ಅನುಮೋದನೆಗೆ ಒಳಪಟ್ಟಿರುತ್ತದೆ.

ಸ್ನಾತಕೋತ್ತರ ಕೋರ್ಸುಗಳನ್ನು ಪರೀಕ್ಷೆಯ ಫಲಿತಾಂಶಗಳನ್ನು ಘೋಷಿಸುವ ಸಂದರ್ಭದಲ್ಲಿ ಎಷ್ಟು ರ‍್ಯಾಂಕುಗಳನ್ನು ನೀಡಬೇಕೆಂಬ ವಿಷಯದ ಬಗ್ಗೆ ಸ್ಪಷ್ಟೀಕರಣ ಬೇಕಾದ ತೊಂದರೆ ಉದ್ಭವಿಸಿತು. ಸಾಮಾನ್ಯವಾಗಿ ಇತರೆ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿ ಮೆರಿಟ್ ಆಧಾರದ ಮೇಲೆ ಮೂರು ರ‍್ಯಾಂಕ್‌ಗಳನ್ನು ಅಂದರೆ, **ಒಂದನೇ ರ‍್ಯಾಂಕ್**, **ಎರಡನೇ ರ‍್ಯಾಂಕ್** ಮತ್ತು **ಮೂರನೇ ರ‍್ಯಾಂಕ್‌ಗಳನ್ನು** ಘೋಷಿಸುವ ಪದ್ಧತಿ ಇರುತ್ತದೆ. ಇದೇ ಪದ್ಧತಿಯಂತೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿ ಪರೀಕ್ಷೆಗಳ ಫಲಿತಾಂಶದಲ್ಲಿ ಮೂರು ರ‍್ಯಾಂಕುಗಳನ್ನು ಘೋಷಿಸಲು

B. Thimmegowda

ಕುಲಪತಿಗಳು ದಿನಾಂಕ 22-02-2019 ರ ಆದೇಶದ ಮೂಲಕ ಅವಕಾಶ ಕಲ್ಪಿಸಿದ್ದಾರೆ. ಆದೇಶದ ಪ್ರತಿಯನ್ನು ಅನುಬಂಧ-'ಅ'ನಲ್ಲಿ ಲಗತ್ತಿಸಲಾಗಿದೆ.

ಮೇಲಿನಂತೆ ಕುಲಪತಿಗಳು ತೆಗೆದುಕೊಂಡ ಕ್ರಮವನ್ನು ಶೈಕ್ಷಣಿಕ ಪರಿಷತ್ತಿನ ಅನುಮೋದನೆಗೆ ಮಂಡಿಸಲಾಗಿದೆ.

**Reference Note:**

The Ordinances Governing the Choice Based Credit System for Two Years (Four semesters) Masters Degree Programmes in various Schools of the University, have been assented by the Chancellor on 19-11-2018. Clause 18.2 of the Ordinances contemplates that "The candidates who pass all the semester examinations in the first attempts are eligible for ranks provided they secure at least CGPA of 6.00 (Alpha-Sign Grade A). Clause 23 deals with *"POWER TO REMOVE DIFFICULTIES"*, ie., *i) If any difficulty arises in giving effect to the provisions of these Ordinances, the Vice-Chancellor may by order make such provisions not inconsistent with the Act, Statutes, Ordinances or other Regulations, as appears to be necessary or expedient to remove the difficulty. ii) Every order made under this rule shall be subject to ratification by the Appropriate University Authorities.*

While declaring the results of PG examinations, a difficulty has arisen as to the **number of ranks** to be declared in each P.G. Programme after successful completion of two years Course by the students in all the semester examinations. Normally, in all the conventional Universities in the State, three ranks ie., I Rank, II Rank and III Rank, are declared based on the percentage of marks/CGPA secured by the students in first attempt in all the semesters of the Postgraduate Programmes/Courses.

In the above circumstances, the Vice Chancellor in exercise of the powers conferred under Clause 23 (i) of the Ordinances Governing the Choice Based Credit System for Two Years (Four semesters) Masters Degree Programmes in various Schools of the University, by an Order No. RDPRU 01 ACA 2019, dated 22-02-2019 made a provision for declaration of **Three Ranks** Viz., **First Rank, Second Rank and Third Rank**, in each of the Postgraduate Programme conducted in the University based on the percentage of marks/CGPA secured by the candidates in the examinations of all the Semesters of the Course in first attempt. A copy of the said Order is attached as **Annexure-A.**

The action taken by the Vice Chancellor as above, is placed before the Academic Council for ratification.

*ನಿರ್ಣಯ:*

**ಶೈಕ್ಷಣಿಕ ಪರಿಷತ್ತು ಕುಲಪತಿಗಳು ದಿನಾಂಕ 22-02-2019 ರ ಆದೇಶದ ಮೂಲಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿ ಪರೀಕ್ಷೆಗಳ ಫಲಿತಾಂಶದಲ್ಲಿ ಮೂರು ರ್‍ಯಾಂಕುಗಳನ್ನು ಘೋಷಿಸಲು ಅವಕಾಶ ಕಲ್ಪಿಸಲು ತೆಗೆದುಕೊಂಡ ಕ್ರಮವನ್ನು ಅನುಮೋದಿಸಿತು.**

***Resolution:***

**The Academic Council ratified the action taken by the Vice Chancellor in making a provision for declaration of three ranks in the University Examinations through the Order dated 22-02-2019.**

## ಹೆಚ್ಚುವರಿ ಕಾರ್ಯಸೂಚಿ-3

ವಿಷಯ ಸಂಖ್ಯೆ 9: ದಿನಾಂಕ 1ನೇ ಮಾರ್ಚ್, 2019 ರಂದು ಜರುಗಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಅಧ್ಯಯನ ಮಂಡಳಿ ಸಭೆಯ ನಡವಳಿಗಳನ್ನು ಪರಿಗಣಿಸುವ ಬಗ್ಗೆ.

**To consider the Proceedings and recommendations of the meeting of the Board of Studies in Rural Development and Panchayat Raj held on 1st March 2019.**

ಪರಾಮರ್ಷನ ಟಿಪ್ಪಣಿ

ದಿನಾಂಕ 1ನೇ ಮಾರ್ಚ್, 2019 ರಂದು ವಿಶ್ವವಿದ್ಯಾಲಯದ ಗದಗ ಕಾರ್ಯಾಲಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಅಧ್ಯಯನ ಮಂಡಳಿಯ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಎಂ.ಎ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕೋರ್ಸಿಗೆ ಸಂಬಂಧಿಸಿದ ಪಠ್ಯ ಕ್ರಮವನ್ನು ಪರಿಷ್ಕರಣೆ ಮಾಡಲಾಗಿದೆ. ಸದರಿ ಸಭೆಯ ನಡವಳಿಗಳನ್ನು ಶೈಕ್ಷಣಿಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

***Reference Note:***

A meeting of the Board of Studies (BoS) in Rural Development and Panchayat Raj was held on 1st March 2019 in the University Office at Gadag. The BoS has updated the syllabi and the Course contents of M.A. Rural Development and Panchayat Raj Course. The Proceedings of the BoS meeting are placed before the Academic Council for consideration and approval.

*ನಿರ್ಣಯ:*

ದಿನಾಂಕ 1ನೇ ಮಾರ್ಚ್, 2019 ರಂದು ವಿಶ್ವವಿದ್ಯಾಲಯದ ಗದಗ ಕಾರ್ಯಾಲಯದಲ್ಲಿ ಜರುಗಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಅಧ್ಯಯನ ಮಂಡಳಿಯ ಸಭೆಯ ನಡವಳಿಗಳನ್ನು ಮತ್ತು ಶಿಫಾರಸುಗಳನ್ನು ಪರಿಗಣಿಸಿ ಅನುಮೋದಿಸಿತು.

***Resolution:***

**The Academic Council approved the Proceedings and recommendations of the meeting of the Board of Studies in Rural Development and Panchayat Raj held on 1st March 2019.**

## ಹೆಚ್ಚುವರಿ ಕಾರ್ಯಸೂಚಿ-4

ವಿಷಯ ಸಂಖ್ಯೆ 10: ದಿನಾಂಕ 31ನೇ ಜನವರಿ, 2019 ರಂದು ಜರುಗಿದ ಎಂ.ಪಿ.ಹೆಚ್. ಕೋರ್ಸಿನ ಅಧ್ಯಯನ ಮಂಡಳಿ ಸಭೆಯ ನಡವಳಿಗಳನ್ನು ಪರಿಗಣಿಸುವ ಬಗ್ಗೆ.

**To consider the Proceedings and recommendations of the meeting of the Board of Studies in Public Health (M.P.H) held on 31st January 2019.**

ಪರಾಮರ್ಷನ ಟಿಪ್ಪಣಿ

ದಿನಾಂಕ 31ನೇ ಜನವರಿ, 2019 ರಂದು ವಿಶ್ವವಿದ್ಯಾಲಯದ ಗದಗ ಕಾರ್ಯಾಲಯದಲ್ಲಿ ಎಂ.ಪಿ.ಹೆಚ್. ಕೋರ್ಸಿನ ಅಧ್ಯಯನ ಮಂಡಳಿ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಸದರಿ ಕೋರ್ಸಿಗೆ ಸಂಬಂಧಿಸಿದ ಪಠ್ಯಕ್ರಮವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದ ಮಾದರಿ ಪಠ್ಯಕ್ರಮದನುಸಾರ

ಮಾರ್ಪಾಡುಗಳನ್ನು ಮತ್ತು ಪ್ರವೇಶಕ್ಕೆ ಅರ್ಹತೆಯಲ್ಲಿ ಮಾರ್ಪಾಡುಗಳನ್ನು ಮಾಡಲಾಗಿದೆ. ಸದರಿ ಸಭೆಯ ನಡವಳಿಗಳನ್ನು ಶೈಕ್ಷಣಿಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

ಮುಂದುವರೆದು, ಮಾರ್ಪಡಿತ ಪ್ರವೇಶಾರ್ಹತೆಯಂತೆ ಎಂ.ಪಿ.ಹೆಚ್. ಕೋರ್ಸಿಗೆ ಯಾವುದೇ ಪದವೀಧರರು ಪ್ರವೇಶ ಪಡೆಯಬಹುದು. ಆದರೆ ಆರೋಗ್ಯ ಕ್ಷೇತ್ರದಲ್ಲಿ ಅನುಭವವಿರುವವರಿಗೆ ಆಧ್ಯತೆ ನೀಡಬಹುದಾಗಿದೆ. 2018-19ನೇ ಸಾಲಿನಲ್ಲಿ ಈ ಕೋರ್ಸಿಗೆ ಕೆಲವು ಬಿ.ಎ.ಎಂ.ಎಸ್, ಬಿ.ಹೆಚ್.ಎಂ.ಎಸ್. ಮತ್ತು ಬಿ.ಡಿ.ಎಸ್. ಪದವೀಧರರು ಪ್ರವೇಶ ಪಡೆದಿರುತ್ತಾರೆ. ಇವರುಗಳು ವಿಶ್ವವಿದ್ಯಾಲಯಕ್ಕೆ ಮನವಿ ಸಲ್ಲಿಸಿ ಅವರ ಎಂ.ಪಿ.ಹೆಚ್. ಪದವಿಯ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ನೀಡುವಾಗ ಅವರ ಹೆಸರಿಗೆ ಮುಂಚೆ 'ಡಾ:(Dr.)' ಎಂದು ನಮೂದಿಸಬೇಕೆಂದು ಕೋರಿರುತ್ತಾರೆ. ಸಾಮಾನ್ಯವಾಗಿ ವಿಶ್ವವಿದ್ಯಾಲಯ ಅಂಕಪಟ್ಟಿ ಮತ್ತು ಪದವಿ ಪತ್ರಗಳನ್ನು ನೀಡುವಾಗ ವಿದ್ಯಾರ್ಥಿಗಳ ಪಿ.ಯು.ಸಿ/ ಎಸ್.ಎಸ್.ಎಲ್.ಸಿ ಅಂಕಪಟ್ಟಿಗಳಲ್ಲಿ ಇರುವ ಹಾಗೆ ಅವರ ಹೆಸರುಗಳನ್ನು ನಮೂದಿಸಲಾಗುವುದು. ಈ ಸಂಬಂಧ ವಿವರಿಸುವುದೇನೆಂದರೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇಲ್ಲಿ ನಡೆಸುವ ಎಂ.ಪಿ.ಹೆಚ್.(ಹಾನರ್ಸ್) ಕೋರ್ಸಿನ ಪದವೀಧರ ವಿದ್ಯಾರ್ಥಿಗಳ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ನೀಡುವಾಗ ವಿದ್ಯಾರ್ಥಿಗಳ ಹೆಸರುಗಳ ಮುಂಚೆ 'ಡಾ:(Dr.)' ಎಂದು ನಮೂದಿಸಲಾಗುತ್ತಿದೆ. ಅಲ್ಲಿನ ಎಂ.ಪಿ.ಹೆಚ್. ಕೋರ್ಸಿಗೆ ಪ್ರವೇಶ ಪಡೆಯುವ ಅಭ್ಯಾರ್ಥಿಗಳೆಲ್ಲರೂ ಆರೋಗ್ಯ ಕ್ಷೇತ್ರದಲ್ಲಿ ಪದವೀಧರರಾಗಿರುತ್ತಾರೆ. ಈಗ ನಮ್ಮ ವಿಶ್ವವಿದ್ಯಾಲಯದಲ್ಲಿ ಇಂತಹ ಎಂ.ಪಿ.ಹೆಚ್. ವಿದ್ಯಾರ್ಥಿಗಳು ಸಲ್ಲಿಸಿರುವ ಮನವಿಯ ಹಿನ್ನೆಲೆಯಲ್ಲಿ ಅವರ ಹೆಸರುಗಳ ಮುಂಚೆ 'ಡಾ:(Dr.)' ಎಂದು ನಮೂದಿಸಿ ಅಂಕಪಟ್ಟಿ ಮತ್ತು ಪದವಿ ಪತ್ರಗಳನ್ನು ನೀಡಲು ಶೈಕ್ಷಣಿಕ ಪರಿಷತ್ತಿನ ಪರಿಗಣನೆಗೆ ಮಂಡಿಸಲಾಗಿದೆ. ಆರೋಗ್ಯ ಕ್ಷೇತ್ರದ ಹಿನ್ನೆಲೆಯಿಲ್ಲದ ಇತರೆ ಪದವೀದರ ವಿದ್ಯಾರ್ಥಿಗಳಿಗೆ ಅವರುಗಳ ಎಸ್.ಎಸ್.ಎಲ್.ಸಿ/ ಪಿ.ಯು.ಸಿ/ ಪದವಿ ಪ್ರಮಾಣ ಪತ್ರಗಳಲ್ಲಿರುವ ಹೆಸರುಗಳಂತೆಯೇ ಅಂಕಪಟ್ಟಿ / ಪದವಿ ಪ್ರಮಾಣ ಪತ್ರಗಳನ್ನು ನೀಡಲಾಗುವುದು.

***Reference Note:***

A meeting of the Board of Studies (BoS) in Master of Public Health (M.P.H) was held on 31st January 2019 in the University Office at Gadag. The BoS has reviewed and made certain modifications in the syllabi for the M.P.H. Course as per the model curriculum of Ministry of Health and Family Welfare and in the eligibility criteria for admission to M.P.H Course. The Proceedings of the BoS meeting are placed before the Academic Council for consideration and approval.

Further, it is submitted that as per the modified eligibility criteria for admission to M.P.H. Course (Agenda No.2 of BoS Proceedings), any graduate may apply for this program, but preference may be given to those who have health field experience. During the academic year 2018-19 a few B.A.M.S., B.H.M.S. and B.D.S. graduates have taken admission to M.P.H. Course. They are requesting the University to issue their Marks Cards and Degree Certificates of M.P.H. Course prefixing "Dr." to their names, as they are already Doctors before their admission to this course. In the normal course, University issues marks cards and degree certificates to the graduate students indicating the names as appeared in their PUC/SSLC Marks cards. It is to be mentioned here that in the Rajiv Gandhi University of Health Sciences, Bengaluru, the Marks Cards and Degree Certificates for M.P.H. (Honors) graduates are issued by prefixing "Dr." to the names of candidates as all the students getting admission to this course are degree holders in different Health Sciences. In the circumstances, the request of such students to issue the M.P.H. Marks Cards and Degree Certificates prefixing "Dr." to their names is placed before the Academic Council for consideration. For other graduate students other than health Sciences, their marks cards will be issued as per their names appeared in SSLC/PUC/Degree Certificates.

***ನಿರ್ಣಯ:***

**ದಿನಾಂಕ 31ನೇ ಜನವರಿ 2019 ರಂದು ವಿಶ್ವವಿದ್ಯಾಲಯದ ಗದಗ ಕಾರ್ಯಾಲಯದಲ್ಲಿ ಜರುಗಿದ ಎಂ.ಪಿ.ಹೆಚ್. ಕೋರ್ಸಿನ ಅಧ್ಯಯನ ಮಂಡಳಿಯ ಸಭೆಯ ನಡವಳಿಗಳನ್ನು ಮತ್ತು ಶಿಫಾರಸುಗಳನ್ನು ಪರಿಗಣಿಸಿ ಅನುಮೋದಿಸಿತು. ಮುಂದುವರೆದು, ಆರೋಗ್ಯ ಕ್ಷೇತ್ರದ ಹಿನ್ನೆಲೆ/ಪದವಿ ಪಡೆದಿರುವ ಎಂ.ಪಿ.ಹೆಚ್.**

B. Thimmegowda

ಪದವೀದರರಿಗೆ ಅವರ ಹೆಸರುಗಳ ಮುಂಚೆ 'ಡಾ:(Dr.)' ಎಂದು ನಮೂದಿಸಿ ಅಂಕಪಟ್ಟಿ ಮತ್ತು ಪದವಿ ಪತ್ರಗಳನ್ನು ನೀಡುವ ಪ್ರಸ್ತಾವನೆಯನ್ನು ಶೈಕ್ಷಣಿಕ ಪರಿಷತ್ತು ಅನುಮೋದಿಸಲು ನಿರ್ಣಯಿಸಿತು.

***Resolution:***

**The Academic Council approved the Proceedings and recommendations of the meeting of the Board of Studies in Public Health (M.P.H) held on 31st January 2019. It was further resolved to approve the proposal to issue Marks Cards and Degree Certificates to M.P.H. graduate with Health Science background/degrees by prefixing "Dr." to their names.**

Registrar
Member-Secretary

Vice Chancellor
Chairperson